ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು
ನಿಗಮ ನಿಯಮಿತ,
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಯ ಮತ್ತು ಪಾಲನ ಉಪ ವಿಭಾಗ
ಚಾ.ವಿ.ಸ.ನಿ.ನಿ. ಬೆಟ್ಟದಪುರ-571102
Telephone No : 08223-275464

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
O & M Sub division
CESC, Bettadapura-571 102
Website: www.cescmysore.org
E-mail: aeecescbpura@gmail.com
Company Identity Number[CIN] :- U40109KA2004SGC035177

ಕ್ರಮಾಂಕ:ಸ.ಕಾ.ನಿ.ಇಂ(ವಿ)/ಸ.ಇಂ(ತಾ)/ಸೆಸ್ಕ್/ಬೆ.ಪು/2020-21/ 1377 ದಿನಾಂಕ: 31-12-2020

## ಸಭೆ ನಡಾವಳಿಗಳು

ದಿನಾಂಕ 23.12.2020 ರಂದು ಮಧ್ಯಾಹ್ನ 3 ಗಂಟೆಗೆ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾ.ವಿ.ಸ.ನಿ.ನಿ ಕೆ.ಆರ್. ನಗರ ರವರ ಅಧ್ಯಕ್ಷತೆಯಲ್ಲಿ ನಡೆದ ಬೆಟ್ಟದಪುರ ಕಾರ್ಯ ಮತ್ತು ಪಾಲನ ಉಪವಿಭಾಗದ ವ್ಯಾಪ್ತಿಯ ಜನ ಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು,**

1. ಶ್ರೀ ಚಂದ್ರಶೇಖರ್ ಬಿ.ಎಸ್, ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾ.ವಿ.ಸ.ನಿ.ನಿ, ಕೆ.ಆರ್. ನಗರ.
2. ಶ್ರೀ ಕುಮಾರ್ ಸಿ. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾ.ವಿ.ಸ.ನಿ.ನಿ. ಬೆಟ್ಟದಪುರ.
3. ಶ್ರೀ ರಾಜೇಶ್ ಪಿ. ಸಹಾಯಕ ಇಂಜಿನಿಯರ್ (ತಾಂ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾ.ವಿ.ಸ.ನಿ.ನಿ ಬೆಟ್ಟದಪುರ.
4. ಶ್ರೀ ನವೀನ್ ವಿ.ಎನ್, ಹಿರಿಯ ಸಹಾಯಕ, ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾ.ವಿ.ಸ.ನಿ.ನಿ, ಬೆಟ್ಟದಪುರ.
5. ಶ್ರೀ ಮಣಿಕಂಠ ಕೆ.ಪಿ, ಪ್ರಭಾರ ಕಿರಿಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ಶಾಖೆ, ಸೀಗೂರು.
6. ಶ್ರೀ ಪುಟ್ಟಸ್ವಾಮಿ, ಕಿರಿಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ಶಾಖೆ, ಕಿತ್ತೂರು.
7. ಶ್ರೀ ಸೈಯದ್ ಮಹಮ್ಮದ್ ಗೌಸ್, ಕಿರಿಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ಶಾಖೆ, ರಾವಂದೂರು.
8. ಶ್ರೀ ನಾಗಣ್ಣ, ಕಿರಿಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ಶಾಖೆ, ಕಣಗಾಲು.

ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವಿಭಾಗ ಚಾ.ವಿ.ಸ.ನಿ.ನಿ, ಕೆ.ಆರ್. ನಗರ ರವರು ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಗೆ ಹಾಗೂ ಅಧಿಕಾರಿ/ನೌಕರರಿಗೆ ಸ್ವಾಗತಿಸಿದರು. ಸಭೆಯಲ್ಲಿ ಹಾಜರಿದ್ದ ಗ್ರಾಹಕರ ಸಲಹೆ/ದೂರುಗಳನ್ನು ಆಲಿಸಿ ಈ ಕೆಳಕಂಡಂತೆ ಕ್ರಮವನ್ನು ಕೈಗೊಳ್ಳಲಾಯಿತು.

| ಕ್ರ.ಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ದಾಖಲಾದ ದೂರು/ಸಲಹೆಯ ವಿವರ | ಅನುಪಾಲನಾ ಕ್ರಮ |
|---|---|---|---|
| 1. | ಶ್ರೀ ವಿರೂಪಾಕ್ಷ ಕೆಲ್ಲೂರು ಗ್ರಾಮ | ಶ್ರೀ ವಿರೂಪಾಕ್ಷ , ಕೆಲ್ಲೂರು ಗ್ರಾಮ ರವರು ನಮ್ಮ ಮನೆ ಮೇಲೆ ವಿದ್ಯುತ್ ತಂತಿಯು ಹಾದು ಹೋಗಿದ್ದು, ಅದನ್ನು ಬದಲಾಯಿಸಿಕೊಡುವಂತೆ ಸಭೆಯಲ್ಲಿ ಕೇಳಿಕೊಂಡರು | ರಾವಂದೂರು ಶಾಖಾಧಿಕಾರಿ ರವರಿಗೆ ಸ್ಥಳ ಪರಿಶೀಲಿಸಿ, ಅಂದಾಜು ಪಟ್ಟಿಯನ್ನು ತಯಾರಿಸಿ, ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಕ್ರಮ ವಹಿಸುವಂತೆ ಸಭೆಯಲ್ಲಿ ಸೂಚಿಸಲಾಯಿತು. |
| 2 | ಶ್ರೀ ರವಿ, ರಾಮನಾಥತುಂಗ ಗ್ರಾಮ | ಶ್ರೀ ರವಿ, ರಾಮನಾಥತುಂಗ ಗ್ರಾಮ, ರವರು ನಮ್ಮ ಗ್ರಾಮದ 25 ಕೆ.ವಿ.ಎ ಪರಿವರ್ತಕದ ಮೇಲೆ 6 ಪಂಪ್ ಸೆಟ್ ಗಳು ಇದ್ದು ಅಧಿಕ ಭಾರದಿಂದ ಕೂಡಿದೆ. ಆದ್ದರಿಂದ ವೋಲ್ಟೇಜ್ ಸರಿಯಾಗಿ ಸಿಗುತ್ತಿಲ್ಲ, ಆದ್ದರಿಂದ ಇನ್ನೊಂದು ಪರಿವರ್ತಕವನ್ನು ಅಳವಡಿಸಿಕೊಡುವಂತೆ ಸಭೆಯಲ್ಲಿ ಕೋರಿದರು. | ಸೀಗೂರು ಶಾಖಾಧಿಕಾರಿ ರವರಿಗೆ ಎಲ್ಲಾ ಪಂಪ್ ಸೆಟ್ ಗಳು ಸಕ್ರಮವಾಗಿರುವುದನ್ನು ಪರಿಶೀಲಿಸಿ, PTK ಯೋಜನೆಯಡಿಯಲ್ಲಿ ಅಂದಾಜು ಪಟ್ಟಿ ತಯಾರಿಸಿ ವಿಭಾಗ ಕಛೇರಿಗೆ ಸಲ್ಲಿಸಲು ಸಭೆಯಲ್ಲಿ ಸೂಚಿಸಿದರು. |

| | | | |
|---|---|---|---|
| 3 | ಶ್ರೀ ಮಾರುತಿ ಗುರುವಾಯನ ಕೊಪ್ಪಲು ಗ್ರಾಮ | ಗುರುವಾಯನ ಕೊಪ್ಪಲು ಗ್ರಾಮದ 25 kVA ಐ.ಪಿ ಪರಿವರ್ತಕವು ವಿಫಲಗೊಂಡಿದ್ದು, ಇದನ್ನು ಬದಲಾಯಿಸಿಕೊಡುವಂತೆ ಕೋರಿದರು. | ಶಾಖಾಧಿಕಾರಿ ರಾವಂದೂರು ರವರಿಗೆ ವಿಫಲಗೊಂಡಿರುವ ಪರಿವರ್ತಕವನ್ನು ಬದಲಾಯಿಸಲು ಕ್ರಮವನ್ನು ತೆಗೆದುಕೊಳ್ಳಲು ಸೂಚಿಸಲಾಯಿತು. |
| 4 | ರಾಮಣ್ಣ ಗಂಗನಕುಪ್ಪೆ ಗ್ರಾಮ | ಗಂಗನಕುಪ್ಪೆ ಗ್ರಾಮದ ನಮ್ಮ ಮನೆಯ ಗೇಟಿನ ಮುಂದೆ ಇರುವ ವಿದ್ಯುತ್ ಕಂಬವನ್ನು ಸ್ಥಳಾಂತರ ಮಾಡಿಸಿಕೊಡುವಂತೆ ಸಭೆಯಲ್ಲಿ ಕೋರಿದರು. | ಕಣಗಾಲು ಶಾಖಾಧಿಕಾರಿ ರವರಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಿ ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿಯಲ್ಲಿ ವಿದ್ಯುತ್ ಕಂಬವನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಿದರು. |
| 5 | ಶ್ರೀ ಗಿರೀಶ್ ಭುವನಹಳ್ಳಿ ಗ್ರಾಮ | ಭುವನಹಳ್ಳಿ ಗ್ರಾಮದ 25 kVA ಐ.ಪಿ ಪರಿವರ್ತಕವು ವಿಫಲಗೊಂಡಿದ್ದು, ಇದನ್ನು ಬದಲಾಯಿಸಿಕೊಡುವಂತೆ ಕೋರಿದರು. | ಸೀಗೂರು ಶಾಖಾಧಿಕಾರಿ ರವರಿಗೆ ವಿಫಲಗೊಂಡಿರುವ ಪರಿವರ್ತಕವನ್ನು ಬದಲಾಯಿಸಲು ಕ್ರಮವನ್ನು ತೆಗೆದುಕೊಳ್ಳಲು ಸೂಚಿಸಲಾಯಿತು. |

ಸಭೆಯ ಕೊನೆಯಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ರವರು ವಿದ್ಯುತ್ ಗ್ರಾಹಕರಿಂದ ಕೇಳಿ ಬಂದಂತಹ ದೂರುಗಳು ಹಾಗೂ ಸಲಹೆಗಳ ಬಗ್ಗೆ ಸವಿವರವಾಗಿ ಮಾತನಾಡಿ ಸಭೆಯಲ್ಲಿಯೇ ಕೆಲವು ಅಹವಾಲುಗಳಿಗೆ ಸಂಭಂದಿಸಿದಂತೆ ಪರಿಹಾರ ಮಾರ್ಗೋಪಾಯಗಳನ್ನು ತಿಳಿಸಿ ಹಾಗೂ ಇತರೆ ಅಹವಾಲುಗಳಿಗೆ ಸಂಬಂಧಪಟ್ಟಂತೆ ಶಾಖಾಧಿಕಾರಿಗಳು ಸ್ಥಳ ಪರೀಶಿಲಿಸಿ ನಿಯಮಾನುಸಾರ ಕ್ರಮ ಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಅನುಪಾಲನಾ ವರದಿ ನೀಡುವಂತೆ ಸೂಚಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ತಮ್ಮ ವಿಶ್ವಾಸಿ

31/12/2020

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಚಾ.ವಿ.ಸ.ನಿ.ನಿ. ಬೆಟ್ಟದಪುರ

**ಪ್ರತಿಗಳು:**

1. ಮಾನ್ಯ ಅಧೀಕ್ಷಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನ ವೃತ್ತ ಚಾ.ವಿ.ಸ.ನಿ.ನಿ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ, ಕಾರ್ಯ ಮತ್ತು ಪಾಲನ ವಿಭಾಗ, ಕೆ.ಆರ್ ನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಶಾಖಾಧಿಕಾರಿಗಳು ಕಾರ್ಯ ಮತ್ತು ಪಾಲನ ಶಾಖೆ ಚಾವಿಸನಿನಿ, ಬೆಟ್ಟದಪುರ/ ಕಿತ್ತೂರು/ ರಾವಂದೂರು/ ಕಣಗಾಲು/ ಸೀಗೂರು ರವರ ಮಾಹಿತಿಗಾಗಿ ಹಾಗೂ ಸಭೆಯಲ್ಲಿ ದಾಖಲಾದ ದೂರುಗಳನ್ನು ತ್ವರಿತವಾಗಿ ಸರಿಪಡಿಸಿ ಅನುಪಾಲನ ವರದಿಯನ್ನು ಸಲ್ಲಿಸಲು ಸೂಚಿಸಿದೆ.
4. ಕಛೇರಿ ಪ್ರತಿ.